
# ಮೊಸಳೆ




ಶಂಕರ್

ಕಲೆ: ಅತನು ರಾಯ್

ಕಥಾದಿಂದ ಒಂದು 300ಎಂ ಥಿಂಕ್‌ಬುಕ್

ಎಲ್ಲರೂ ನನ್ನನ್ನು ರಾಜ
ಎಂದು ಕರೆಯುತ್ತಾರೆ.
ಕೇರಳದ ಸಣ್ಣ
ಹಳ್ಳಿಯೊಂದರಲ್ಲಿ ನಾನು ನನ್ನ
ಅಜ್ಜ ಅಜ್ಜಿಯ ಜೊತೆ
ವಾಸಿಸುತ್ತೇನೆ.

ಒಂದು ದಿನ ನಾನು ನಮ್ಮ
ಮನೆಯ ಹತ್ತಿರ ಇರುವ
ಕೆರೆಯಲ್ಲಿ ಒಂದು ದೊಡ್ಡ
ಮೊಸಳೆಯನ್ನು ನೋಡಿದೆ.



ಮೊಸಳೆ ಅಲ್ಲಿರುವುದರ ಬಗ್ಗೆ ನನ್ನ ತೊಂದರೆ ಇರಲಿಲ್ಲ.
ಆದರೆ, ಅದು ನಮ್ಮ ಮೀನುಗಳನ್ನು ತಿನ್ನುವುದು ನನಗೆ ಬೇಕಿರಲಿಲ್ಲ.



ನಾನು ಒಂದು ಮರದ ಹಿಂದೆ ನಿಂತು ಅದರ
ಕಡೆಗೊಂದು ಇಟ್ಟಿಗೆ ಎಸೆದೆ. ಆದರೆ, ಆ ಮೊಸಳೆ ನೀರಿನೊಳಗೆ
ಜಾರಿ ತಪ್ಪಿಸಿಕೊಂಡಿತು.

ನಾನೊಂದು ಹಗ್ಗವನ್ನು ಬಳಸಬಹುದೇನೋ? ಕೊಟ್ಟಿಗೆಯಲ್ಲಿ ನಮ್ಮ ಹಸುಗಳನ್ನು ಗಟ್ಟಿಯಾದ, ಉದ್ದನೆಯ ಹಗ್ಗಗಳಿಂದ ಕಟ್ಟಿದ್ದರು.

ಆದರೆ ಹಗ್ಗ ತೆಗೆದುಕೊಳ್ಳಲು ತಾತ ಬಿಡಲಿಲ್ಲ! ಅವರು ಹೊರಗಡೆ ಹೋಗುವುದನ್ನೇ ನಾನು ಕಾಯುತ್ತಿದ್ದೆ.




ಆಮೇಲೆ, ನಾನೊಂದು ಹಗ್ಗ ತೆಗೆದುಕೊಂಡು ಕೆರೆಯ ಹತ್ತಿರ ಹೋದೆ. ಹಗ್ಗದ ಒಂದು ತುದಿಯಲ್ಲಿ ನಾನೊಂದು ಉರುಲು ಮಾಡಿ, ಇನ್ನೊಂದು ತುದಿಯನ್ನು ಒಂದು ದೊಡ್ಡ ಮರಕ್ಕೆ ಕಟ್ಟಿದೆ.

ಮರುದಿನ ಮುಂಜಾನೆ, ನಾನು ಕೆರೆಯ ಹತ್ತಿರ ಓಡಿದೆ. ಅಲ್ಲಿ, ಆ ದೊಡ್ಡ ಮೊಸಳೆ... ಸಿಕ್ಕಿಬಿದ್ದಿತ್ತು! ಅದು ನನ್ನನ್ನು ನೋಡಿದಾಗ, ತನ್ನ ಬಾಯಿ ತೆರೆದು ತೀಕ್ಷ್ಣವಾಗಿ ಸದ್ದು ಮಾಡುತ್ತಾ ನನ್ನ ಕಡೆಗೆ ನುಗ್ಗಿತು.



ಸುದ್ದಿ ಹರಡಿತು. ಬಹಳ ಜನ ಬಂದರು.
ನನ್ನ ತರಗತಿಯವರೆಲ್ಲರ ಜೊತೆಗೆ ನನ್ನ ಶಿಕ್ಷಕರೂ ಬಂದರು.

ನಾನೊಬ್ಬ ಸಾಹಸಿ ಅನ್ನಿಸಿತು! ಗುಂಪಿನಲ್ಲಿದ್ದ ಕೆಲವರು
ಮೊಸಳೆಯನ್ನು ಹಿಂಸಿಸಲು ಹೊರಟಿದ್ದರು.
ಅದು ನನ್ನ ಮೊಸಳೆ, ನಾನು ಅದನ್ನು ಬಿಟ್ಟುಬಿಡುತ್ತೇನೆ
ಎಂದು ನಾನು ಅವರಿಗೆ ಹೇಳಿದೆ.





ಆದರೆ ಅವರು ಅದನ್ನು ಸಾಯಿಸಬೇಕು
ಎಂದರು. ನಾನು ಒಬ್ಬನೇ ಇದ್ದೆ
ಮತ್ತು ಅಸಹಾಯಕನಾಗಿದ್ದೆ.

ಅಷ್ಟರಲ್ಲಿ, ತಾತ ಬಂದರು! ನನ್ನ ಮೊಸಳೆಯನ್ನು
ಉಳಿಸಲು ಅವರೊಬ್ಬರಿಗೆ ಮಾತ್ರ ಸಾಧ್ಯವಿತ್ತು.

ಮೊಸಳೆಯನ್ನು ಯಾರೂ ಹಿಂಸಿಸಬಾರದು
ಎಂದು ತಾತ ಗಟ್ಟಿ ಧ್ವನಿಯಲ್ಲಿ ಹೇಳಿದರು.
ನನ್ನ ಕಡೆಗೆ ತಿರುಗಿ, ‘ರಾಜ, ಅದನ್ನು
ಬಿಟ್ಟುಬಿಡು, ಈಗಲೇ’ ಎಂದರು.

ನಾವು ಅದನ್ನು ದೇವಸ್ಥಾನದ ದೊಡ್ಡ
ಕೆರೆಗೆ ಕೊಂಡೊಯ್ಯಲು ತೀರ್ಮಾನಿಸಿದೆವು.
ಅಲ್ಲಿ ಇನ್ನೂ ಅನೇಕ ಮೊಸಳೆಗಳಿದ್ದವು.





ನಾವೊಂದು ದೊಡ್ಡ ಏಣಿಯನ್ನೂ ಮೊಸಳೆಯನ್ನೂ ಕೆರೆಯ ಹತ್ತಿರ ಕೊಂಡೊಯ್ದೆವು. ಆಮೇಲೆ ನಾವು ಮೊಸಳೆಯನ್ನು ನೀರಿನ ಹತ್ತಿರ ತಡೆಹಿಡಿದೆವು.

ನಾವು ಅದರ ಮೇಲೆ ಏಣಿಯನ್ನು ಇಟ್ಟೆವು. ಮೊಸಳೆ ಅಲುಗಾಡದ ಹಾಗೆ ಎಂಟು ಜನ ಏಣಿಯನ್ನು ಎರಡೂ ತುದಿಗಳಲ್ಲಿ ಒತ್ತಿ ಹಿಡಿದುಕೊಂಡರು.

ಆಮೇಲೆ ನಾನು ಮೊಸಳೆಗೆ ಕಟ್ಟಿದ್ದ ಹಗ್ಗವನ್ನು ಕತ್ತರಿಸಿದೆ. ಏಣಿಯನ್ನು ತೆಗೆದ ತಕ್ಷಣ ಮೊಸಳೆ ಕೆರೆಯೊಳಕ್ಕೆ ಧುಮುಕಿತು!

ಸ್ವಲ್ಪ ದಿನಗಳ ನಂತರ ನನ್ನ ಮೊಸಳೆ ನಾನು ಅದನ್ನು ಮೊದಲು ನೋಡಿದ್ದ ಕೆರೆಗೇ ಮತ್ತೆ ಬಂದಿತ್ತು... ಬಿಸಿಲು ಕಾಯಿಸುತ್ತಿತ್ತು!

**ಶಂಕರ್** – ಕೆ. ಶಂಕರ್ ಪಿಳ್ಳೈ – ಹುಟ್ಟಿದ್ದು ಕೇರಳದಲ್ಲಿ. ಮಕ್ಕಳ ಪುಸ್ತಕಗಳ ಲೇಖಕ ಹಾಗೂ ಚಿತ್ರಕಾರರಾದ ಅವರನ್ನು ಚಿಲ್ಡ್ರನ್ಸ್ ಬುಕ್ ಟ್ರಸ್ಟ್ ಹಾಗೂ ಶಂಕರ್ಸ್ ಇಂಟರ್ನ್ಯಾಶನಲ್ ಡಾಲ್ಸ್ ಮ್ಯೂಸಿಯಂಗಳ ಸ್ಥಾಪಕರೆಂದು ನೆನಪಿಸಿಕೊಳ್ಳಲಾಗುತ್ತದೆ. 1976ರಲ್ಲಿ ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿ ನೀಡಲಾಯಿತು.

**ಅತನು ರಾಯ್** ನೂರಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳಿಗೆ ಚಿತ್ರರಚನೆ ಮಾಡಿದ್ದಾರೆ. ಈ ಹಿಂದೆ ಇಂಡಿಯಾ ಟುಡೆಯಲ್ಲಿ ರಾಜಕೀಯ ವ್ಯಂಗ್ಯಚಿತ್ರಕಾರರಾಗಿ ಕೆಲಸಮಾಡಿದ್ದ ರಾಯ್ ಅವರಿಗೆ ಚಿಲ್ಡ್ರನ್ಸ್ ಚಾಯ್ಸ್ ಅವಾರ್ಡ್ ಫಾರ್ ಬುಕ್ ಇಲ್ಲಸ್ಟ್ರೇಶನ್ಸ್ ಹಾಗೂ ಐಬಿಬಿವೈ ಸರ್ಟಿಫಿಕೇಟ್ ಆಫ್ ಆನರ್ ಫಾರ್ ಇಲ್ಲಸ್ಟ್ರೇಶನ್ಸ್ ಗೌರವಗಳು ದೊರೆತಿವೆ.

# KATHA

**ಕಥಾ ಒಂದು ಪ್ರಸಿದ್ಧಲಾಭರಹಿತ ಸಂಸ್ಥೆಯಾಗಿದ್ದು (www.katha.org), ಅಕ್ಷರಜ್ಞಾನದಿಂದಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ 1988ರಿಂದ ಕೆಲಸ ಮಾಡುತ್ತಿದೆ. ಸುಮಾರು 30 ವರ್ಷಗಳ ನಮ್ಮ ಅನುಭವವು ಬಡ ಮಕ್ಕಳ ಪುಸ್ತಕಮತ್ತು ಶಿಕ್ಷಣದ ಕ್ಷೇತ್ರದಲ್ಲಿದೆ.**

"ಭಾರತದ ಕಿರೀಟದಲ್ಲೊಂದು ಶಿಕ್ಷಣದ ಆಭರಣ." **– ನವೋಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕರು, ಐಎಂಎಫ್**

"ನಗರಗಳಲ್ಲಿನ ಸಾಮಾನ್ಯ ಮತ್ತು ಅನಿರೀಕ್ಷಿತ ದುಃಖಗಳೊಡನೆ ಸೆಣಸಾಡುವ ಜಗತ್ತಿನ ಎಲ್ಲ ಸೃಜನಶೀಲ ಯೋಜನೆಗಳಿಗೆ ಕಥಾ ಒಂದು ಉದಾಹರಣೆಯಾಗಿದೆ." **– ಚಾರ್ಲ್ಸ್ ಲ್ಯಾಂಡ್ರಿ, ದಿ ಆರ್ಟ್ ಆಫ್ ಸಿಟಿ ಮೇಕಿಂಗ್**

"ಕಥಾ ಮಕ್ಕಳ ಕುರಿತು ನಿಜವಾದ ಕಾಳಜಿ ಇಟ್ಟುಕೊಂಡಿದೆ. ಅದಕ್ಕಾಗಿಯೇ ಅದು... ಮಕ್ಕಳಿಗಾಗಿ ಅಷ್ಟೊಂದು ಸುಂದರವಾದ ಚಿತ್ರದ ಪುಸ್ತಕಗಳನ್ನು ರೂಪಿಸುತ್ತದೆ." **– ಟೈಮ್ ಔಟ್**

"ಮಕ್ಕಳು[ತಮ್ಮ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಲ್ಲಿ ಮುಂದುವರೆಯುವಂತಹ ಮತ್ತು ನಿಜವಾದ ಬದಲಾವಣೆ ತರಬಹುದು ಎಂಬ ಭಾವನೆ ಕಥಾದ ಕೆಲಸಕ್ಕೆ ಚಾಲನೆ ನೀಡುತ್ತದೆ." **– ಪೇಪರ್ ಟೈಗರ್ಸ್**

ಈ ಆವೃತ್ತಿ ಮೊದಲ ಬಾರಿಗೆ 2021ರಲ್ಲಿ ಪ್ರಕಟವಾಯಿತು
ಕಾಪಿರೈಟ್ © ಕಥಾ, 1994, 2021
ಪಠ್ಯದ ಕಾಪಿರೈಟ್ © ಶಂಕರ್
ಚಿತ್ರಗಳ ಕಾಪಿರೈಟ್ © ಕಥಾ
ಎ3, ಸರ್ವೋದಯ ಎನ್‌ಕ್ಲೇವ್, ಶ್ರೀ ಅರವಿಂದೋ ಮಾರ್ಗ, ನವದೆಹಲಿ 110 017.
ದೂರವಾಣಿ: 91–11 4141 6600 . 4141 6610
ಇ–ಮೇಲ್: editors@katha.org, ವೆಬ್‌ಸೈಟ್: www.katha.org
ಐಎಸ್‌ಬಿಎನ್ 978–93–82454–65–6

**ನಮ್ಮ ಧ್ಯೇಯ:** ಪ್ರತಿಯೊಂದು ಮಗುವೂ ಚೆನ್ನಾಗಿ ಓದಬೇಕು, ಖುಷಿಗಾಗಿ ಓದಬೇಕು!

ಕಥಾ ಎಂಬುದು 1988ರಲ್ಲಿ ಪ್ರಾರಂಭವಾದ ಒಂದು ನೋಂದಾಯಿತ, ಲಾಭರಹಿತ ಸಂಸ್ಥೆ. ನಾವು ಅಕ್ಷರಜ್ಞಾನದಿಂದ ಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತೇವೆ. ಮಕ್ಕಳು ಮತ್ತು ವಯಸ್ಕರಲ್ಲಿ ಓದುವ ಸಂತೋಷವನ್ನು ಹೆಚ್ಚಿಸುವ ಉದ್ದೇಶ ಇಟ್ಟುಕೊಂಡಿರುವ ನಾವು, ಗುಣಮಟ್ಟದ ಪುಸ್ತಕಗಳು ಮತ್ತು ಸಹಾಯದ ಮೂಲಕ 1,00,000ಕ್ಕೂ ಹೆಚ್ಚು ಬಡ ಮಕ್ಕಳನ್ನು ಗ್ರೇಡ್ ಮಟ್ಟದ ಓದುವಿಕೆಗೆ ಕರೆತರಲು ಅವರೊಂದಿಗೆ ಕೆಲಸ ಮಾಡುತ್ತೇವೆ.

**ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರುಬಳಕೆ ಮಾಡುವಂತಿಲ್ಲ ಅಥವಾ ಬಳಸಿಕೊಳ್ಳುವಂತಿಲ್ಲ.**
**ಈ ಪುಸ್ತಕಗಳ ಮಾರಾಟದಿಂದ ಬರುವ ಒಟ್ಟು ಆದಾಯದ 10% ಮೊತ್ತವು, ಸವಲತ್ತುಗಳಿಲ್ಲದ ಮಕ್ಕಳ ಓದುವಿಕೆ ಮತ್ತು ಜೀವನ ಪರ್ಯಂತದ ಕಲಿಕೆಯ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.**




ಐ ಲವ್ ರೀಡಿಂಗ್ ಲೈಬ್ರರಿ ಒಂದು ಅನನ್ಯ ಪುಸ್ತಕಗಳ ಸರಣಿಯಾಗಿದ್ದು, ಅದು ಹೊಸ ಮತ್ತು ಸಂಕೋಚ ಸ್ವಭಾವದ ಓದುಗರನ್ನು ಸುಲಭವಾಗಿ ಓದುವಂತೆ ಮಾಡುತ್ತದೆ. ಓದಿನ ವಿಭಿನ್ನ ಹಂತದಲ್ಲಿರುವ ಮಕ್ಕಳ ಕಲಿಕೆಯ ಅಗತ್ಯಗಳಿಗೆ ಸರಿಹೊಂದುವಂತೆ ಉತ್ತಮ ಗುಣಮಟ್ಟದ ವಿಷಯ ಮತ್ತು ವಿನ್ಯಾಸದೊಂದಿಗೆ, ಇದು ಭಾರತ ಮತ್ತು ಪ್ರಪಂಚದ ಅತ್ಯುತ್ತಮ ಸಾಹಿತ್ಯಕ ರಚನೆಗಳು ಮತ್ತು ಕಲಾಕೃತಿಗಳನ್ನು ಒಟ್ಟಿಗೆ ತರುತ್ತದೆ. ನಮ್ಮ ಪುಸ್ತಕಗಳು ಗೀತಾ ಧರ್ಮರಾಜನ್‌ರ ಅನನ್ಯ ಶಿಕ್ಷಣ ಮಾದರಿಯಾದ "ಸ್ಟೋರಿಪೆಡಗಾಜಿ™" ಯ ಸ್ವರೂಪ ಪಡೆದಿವೆ, ಈ ಮಾದರಿಯುವಿಶೇಷವಾಗಿ ಮೊದಲ ತಲೆಮಾರಿನ ಓದುಗರಲ್ಲಿ ಓದಿನ ಸಂತೋಷವನ್ನು ಉತ್ತೇಜಿಸುತ್ತದೆ ಹಾಗೂ ಮಗುವನ್ನು ಬಿಗ್ ಐಡಿಯಾಸ್ ಮತ್ತು **TA-DAA!** (ಥಿಂಕ್, ಆಸ್ಕ್, ಡಿಸ್ಕಸ್, ಆಕ್ಟ್ ಹಾಗೂ ಅಚೀವ್) ಆಕರ್ಷಕ ಜಗತ್ತಿಗೆ ಕರೆದೊಯ್ಯುತ್ತದೆ!

ಕಥಾದ ಹೋಲಿಸ್ಟಿಕ್ ಅರ್ಲಿ ಲರ್ನಿಂಗ್ (**KHEL!**) ಲ್ಯಾಬ್ ಸರ್ಕಾರಿ, ಲಾಭೋದ್ದೇಶವಿಲ್ಲದ ಮತ್ತು ಖಾಸಗಿ ಶಾಲೆಗಳಲ್ಲಿನ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ನಡೆಸುತ್ತದೆ. ಆನ್‌ಲೈನ್ ಸೆಶನ್‌ಗಳಿಂದ ಬೆಂಬಲಿತವಾದ ಈ **F2F** (ಫೇಸ್–ಟು–ಫೇಸ್) ಕಾರ್ಯಾಗಾರಗಳು ಶಿಕ್ಷಕರು, ಶಾಲಾ ಆಡಳಿತಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ "ರೀಡಿಂಗ್ ಟೀಚರ್ಸ್ ಪ್ರಮಾಣಪತ್ರ"ವನ್ನು ದೊರಕಿಸಿಕೊಡುತ್ತವೆ. ಇನ್ನಷ್ಟು ತಿಳಿದುಕೊಳ್ಳಲು, **300m@katha.org** ಸಂಪರ್ಕಿಸಿ

ಈ ಎಲ್ಲ ಐಎಲ್ಆರ್ ಪುಸ್ತಕಗಳನ್ನು ನೀಲಿ ಸರಣಿಯಲ್ಲಿ ಸಂತೋಷ ಮತ್ತು ಅರ್ಥಕ್ಕಾಗಿ ಓದಿ









































FOR OUR BOOKS

www.books.katha.org

"[ಕಥಾ] ... ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ಅಸಾಮಾನ್ಯ ಮತ್ತು ಅಪೂರ್ವವಾದ ಕ್ಷಣ."

– ಅಪ್ರತಿಮ
ದಿ ಎಕನಾಮಿಕ್ ಟೈಮ್ಸ್

for children

a katha book

ISBN 978-93-88284-81-3

www.katha.org

₹ XXX